


# ಟ್ರೈಬಲ್ ಮ್ಯೂಸಿಯಂ

## ಬುಡಕಟ್ಟು ಬದುಕಿನ ಕನ್ನಡಿ


ಪ್ರಾಣಿಯ ಕೊಂಬಿನ ಕಿರೀಟ

■ ಗೀತಾ ಕುಂದಾಪುರ

ತೆಲಂಗಾಣದಲ್ಲಿರುವ ಭದ್ರಾಚಲಂ, ಮಹಾರಾಷ್ಟ್ರದಲ್ಲಿ ಹುಟ್ಟಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಗೋದಾವರಿಯ ದಡದಲ್ಲಿದೆ. ಇಲ್ಲಿನ ಸೀತಾರಾಮಚಂದ್ರ ದೇವಾಲಯ ಬಹಳ ಪ್ರಸಿದ್ಧ. ಹಾಗೆಯೇ ಪ್ರಸಿದ್ಧಿ ಪಡೆದಿರುವ ಇನ್ನೂ ಅನೇಕ ದೇವಾಲಯಗಳು ಇಲ್ಲಿವೆ. ಇದರೊಂದಿಗೆ, ಭದ್ರಾಚಲಂನಲ್ಲಿ ನೋಡಲೇಬೇಕಾದ ಮತ್ತೂ ಒಂದು ಸ್ಥಳವಿದೆ. ಅದೇ, ಟ್ರೈಬಲ್ ಮ್ಯೂಸಿಯಂ ಭದ್ರಾಚಲಂ.

ಭದ್ರಾಚಲಂ ನಗರದ ಮಧ್ಯದಲ್ಲಿ ಹಸಿರು ಮರ ಗಿಡಗಳ ಮಧ್ಯೆ ಪ್ರಶಾಂತ ವಾತಾವರಣದಲ್ಲಿದೆ ಈ ಮ್ಯೂಸಿಯಂ. ವಿಶಾಲವಾದ ಒಂದಸ್ತಿನ ಕಟ್ಟಡದ ಹೊರಭಾಗದಲ್ಲಿ ಉದ್ಯಾನವನವಿದೆ. ಕಟ್ಟಡದ ಮೇಲೆ ನಿಲ್ಲಿಸಿರುವ ಡೋಲು ಬಾರಿಸುತ್ತಿರುವ ಪುರುಷರಿಬ್ಬರ ಮೂರ್ತಿಗಳು ಆಕರ್ಷಣೀಯವಾಗಿವೆ. ಗೋಡೆಯ ಹೊರಭಾಗದಲ್ಲಿ ಸುಂದರ ವರ್ಲಿ ಚಿತ್ರಕಲೆ ಇದೆ.

ಮ್ಯೂಸಿಯಂ ಒಳಗೆ ಕಾಲಿಟ್ಟಾಗ ಬಿದಿರಿನ ಆಲಂಕಾರಿಕ ವಸ್ತುಗಳು, ಗೋಡೆಯ ಮೇಲೆ ಬುಡಕಟ್ಟಿನವರ ಜೀವನಶೈಲಿಯನ್ನು ಸಾರುವ ಚಿತ್ರಕಲೆಗಳು ಬೇರೆಯದೇ ಲೋಕಕ್ಕೆ ಕರೆದೊಯ್ಯುತ್ತವೆ. ಮ್ಯೂಸಿಯಂನಲ್ಲಿ ಬುಡಕಟ್ಟು ಸಮುದಾಯಗಳ ಬೇಟೆಯ ವಿಧಗಳು, ಕಲೆ, ಜನಜೀವನ, ಆಭರಣ, ಕರಕುಶಲ, ಸಂಸ್ಕೃತಿ ಮತ್ತು ಹಬ್ಬ ಹೀಗೆ ಹಲವಾರು ವಿಭಾಗಗಳಿದ್ದು, ಪ್ರತ್ಯೇಕ ಕೊಠಡಿಗಳಲ್ಲಿ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಿಟ್ಟಿದ್ದಾರೆ. ವಸ್ತುಗಳ ಸಂಗ್ರಹಣೆ ಮಾತ್ರವಲ್ಲ, ಆ ಕುರಿತು ವಿವರಣೆ ಕೊಡುವಂತಹ ಫಲಕಗಳೂ ಇವೆ.

ಸಂಗ್ರಹಾಲಯಕ್ಕೆ ಒಂದು ಸುತ್ತು ಬಂದರೆ ಬುಡಕಟ್ಟಿನವರ ಜೀವನಶೈಲಿಯ ಒಳ ಹೊರಗು,


ಮರದ ಮುಖವಾಡಗಳು